ಅಧಿಕೃತ ಶಾಖೆ

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 665( 776) |
| ಮಾನ್ಯ ಸದಸ್ಯರ ಹೆಸರು | : | ಶ್ರೀ.ಬಿ.ಕೆ ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-12-2021 |
| ಉತ್ತರಿಸಬೇಕಾದ ಸಚಿವರು | : | ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು |

<table>
<tr><th>ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕಳೆದ 2 ವರ್ಷಗಳಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನ ಹಾಗೂ ಖರ್ಚಾದ ಅನುದಾನವೆಷ್ಟು ಹಾಗೂ ಬಾಕಿ ಇರುವ ಅನುದಾನವೆಷ್ಟು, (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಸರ್ಕಾರದಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕಳೆದ 2 ವರ್ಷಗಳಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ.</td></tr>
<tr><td>ಆ)</td><td>ಬೆಂಗಳೂರಿನಲ್ಲಿ ವಾಹನ ದಟ್ಟಣೆ ಹಾಗೂ ಕೈಗಾರಿಕೆಯ ಹೊಗೆ ಸೂಸುವಿಕೆಯಿಂದ ಮಾಲಿನ್ಯವು ಮಿತಿಮೀರುತ್ತಿದ್ದು ಇದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಮಂಡಳಿಯ ಮುಂದೆ ಇರುವ ಮಾರ್ಗೋಪಾಯಗಳೇನು?(ವಿಸ್ತೃತ ಮಾಹಿತಿ ಒದಗಿಸುವುದು)</td><td>
<ul><li>ಬೆಂಗಳೂರು ನಗರದ 7 ನಿರಂತರ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವರದಿಯ ಪ್ರಕಾರ, 2020-21ನೇ ಸಾಲಿನ ಸರಾಸರಿ ಎಕ್ಯೂಐ ಸೂಚ್ಯಂಕವು 64 ಆಗಿದ್ದು ತೃಪ್ತಿಕರವಾಗಿರುತ್ತದೆ.</li></ul>
<table>
<tr><th>ಎಕ್ಯೂಐ ವರ್ಗ (ಶ್ರೇಣಿ)</th><th>ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು</th></tr>
<tr><td>(0-50)ಉತ್ತಮ</td><td>ಕನಿಷ್ಟ ಪರಿಣಾಮ</td></tr>
<tr><td>(51-100)ತೃಪ್ತಿಕರ</td><td>ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ</td></tr>
<tr><td>(101-200)ಸಾಧಾರಣ</td><td>ಶ್ವಾಸಕೋಶ, ಹೃದಯ ಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ</td></tr>
<tr><td>(201-300)ಕಳಪೆ</td><td>ದೀರ್ಘಕಾಲಿಕ ಒಳಪಟ್ಟಲ್ಲಿ ಜನರಿಗೆ ಉಸಿರಾಟದ ಅಸ್ವಸ್ಥತೆ</td></tr>
<tr><td>(301-400)ಅತಿ ಕಳಪೆ</td><td>ದೀರ್ಘಕಾಲ ಒಳಪಡುವ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ</td></tr>
<tr><td>(>401)ತೀವ್ರ</td><td>ಆರೋಗ್ಯವಂತ ಜನರಿಗೂ ಉಸಿರಾಟದ ಅಸ್ವಸ್ಥತೆ</td></tr>
</table>
<ul><li>ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯದ ಯೋಜನೆಯಡಿ ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯದ ಮೂಲ ಗುರುತಿಸಿ ವರದಿ ನೀಡಲು ಟೆರ್ರಿ</li></ul>
</td></tr>
</table>

| | | |
|---|---|---|
| | | (TERI) ಸಂಸ್ಥೆಗೆ ವಹಿಸಲಾಗಿ, ಸದರಿ ಸಂಸ್ಥೆಯು 2007ರಲ್ಲಿ ನೀಡಿರುವ ವರದಿಯನ್ವಯ ಬೆಂಗಳೂರು ನಗರದಲ್ಲಿ ಪ್ರತಿ ದಿನ ಒಟ್ಟು ಉತ್ಪತ್ತಿಯಾಗುವ ಧೂಳಿನ ಕಣಗಳ (10 ಮೈಕ್ರಾನ್‌ಗಿಂತ ಕಡಿಮೆ) ಪ್ರಮಾಣ 54.4 ಟನ್‌ನಷ್ಟು ಇದ್ದು, ಇದರಲ್ಲಿ ಸಾರಿಗೆ ವಲಯದಿಂದ 42%ರಷ್ಟು ಹಾಗೂ ಕೈಗಾರಿಕೆ ವಲಯದಿಂದ 14.0%ರಷ್ಟು ಪ್ರಮಾಣ ಇರುವುದು ಕಂಡು ಬಂದಿರುತ್ತದೆ.<br>• ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ (ದೂಳಿನ ಕಣ) ಸಾರಿಗೆ ವಲಯದಿಂದ ಶೇ.42ರಷ್ಟು ಉಂಟಾಗುತ್ತಿರುವುದನ್ನು ಅಧ್ಯಯಿಸಿರುವುದರಿಂದ ಮಂಡಳಿಯು ಡೀಸಲ್ ಮತ್ತು ಪೆಟ್ರೋಲ್ ವಾಹನಗಳು ಹೊರಸೂಸುವ ಹೊಗೆಯನ್ನು ಮಾಪನ ಮಾಡಲು ಸುಸಜ್ಜಿತ ಉಪಕರಣಗಳನ್ನೊಳಗೊಂಡ 6 ವಾಹನಗಳನ್ನು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದ್ದು, ಈ ವಾಹನಗಳು ಸಾರಿಗೆ ಇಲಾಖೆ, ಪೋಲೀಸ್ ಇಲಾಖೆ, ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗಳ ಸಹಾಯದೊಂದಿಗೆ ವಾಹನಗಳ ಹೊಗೆ ಮಾಪನ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು ಮಿತಿಗಿಂತ ಹೆಚ್ಚು ಹೊಗೆ ಹೊರಸೂಸುವ ವಾಹನಗಳ ಮೇಲೆ ಕಾನೂನಾತ್ಮಕವಾಗಿ ಸಾರಿಗೆ ಇಲಾಖೆಯು ಕ್ರಮವನ್ನು ಕೈಗೊಳ್ಳುತ್ತಿದೆ.<br>• ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಲ್ಲಿ ನಿಗಧಿಪಡಿಸಿರುವಂತೆ ವಾಯು ಮಾನಕಗಳು ನಿಗಧಿ ಪಡಿಸಿದ ಪರಿಮಿತಿಯೊಳಗಿರುವಂತೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನೀಡುವ ಸಮ್ಮತಿ ಪತ್ರದಲ್ಲಿ ಷರತ್ತು ವಿಧಿಸಲಾಗುತ್ತಿದೆ ಹಾಗೂ ವಾಯು ಮಾಲಿನ್ಯ ಮಾಡುವಂತಹ ಕಾರ್ಖಾನೆಗಳನ್ನು ನಿಗದಿತ ಅವಧಿ ಪ್ರಕಾರ ಪರಿವೀಕ್ಷಣೆಗೊಳಪಡಿಸಲಾಗುತ್ತಿದೆ.<br>• ರಾಸಾಯನಿಕ ಹಾಗೂ ಇನ್ನಿತರ ಅಧಿಕ ಮಾಲಿನ್ಯ ಉಂಟು ಮಾಡುವ ಕೈಗಾರಿಕೆಗಳಿಗೆ ನಿರಂತರ ಎಮಿಶನ್ ಮಾಪನ ಉಪಕರಣಗಳನ್ನು ಅಳವಡಿಸಿ ಮಾಪನ ವರದಿಯನ್ನು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂತರ್ಜಾಲಗಳಿಗೆ ಸಂಪರ್ಕ |

| | | |
|---|---|---|
| | | ಕಲ್ಪಿಸಲಾಗಿದೆ. ಇದರಿಂದ ಕೈಗಾರಿಕೆಗಳು ನಿಗಧಿ ಪಡಿಸಿದ ಮಾನಕಕ್ಕಿಂತ ಹೆಚ್ಚು ಹೊಗೆ ಹೊರಸೂಸದಂತೆ ಕಾಲಕಾಲಕ್ಕೆ ಇವುಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಿ ಮಂಡಳಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, 2019-20ನೇ ಸಾಲಿನಲ್ಲಿ ಬೆಂಗಳೂರು ವಾಯು ಮಾಲಿನ್ಯ ನಿಯಂತ್ರಣಕ್ಕೆ 10 ಇಲಾಖೆಗಳನ್ನೊಳಗೊಂಡಂತೆ 44 ಅಂಶಗಳ ಕ್ರಿಯಾ ಯೋಜನೆ ಅನುಷ್ಠಾನಗೊಳಿಸುತ್ತಿದ್ದು "ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ" 2019 ರಿಂದ 2025 ಅವಧಿಯಲ್ಲಿ ದೂಳಿನ ಕಣಗಳ ಪ್ರಮಾಣ ಶೇಕಡ 20 ರಿಂದ 30ರಷ್ಟು ತಗ್ಗಿಸುವ ಗುರಿ ಹೊಂದಿದೆ. ಈ ಎಲ್ಲಾ ಇಲಾಖೆಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮದ ಬಗ್ಗೆ ಆಗಿಂದಾಗ್ಗೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುತ್ತದೆ.<br><br>ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯು ವರದಿ ಮಾಡಿರುವಂತೆ ಬೆಂಗಳೂರು ನಗರ ಪಿಎಮ್ 10 ಪ್ರಮಾಣ 2019-20 ಹಾಗೂ 2020-21ರಲ್ಲಿ 75 ಎಮ್‌ಜಿ/ಎಮ್‌ಕ್ಯೂ ಹಾಗೂ 59 ಎಮ್‌ಜಿ/ಎಮ್‌ಕ್ಯೂ ಇರುತ್ತದೆ. ಪ್ರಸ್ತುತ ಬೆಂಗಳೂರು ನಗರದ ವಾಯು ಗುಣಮಟ್ಟ ಹಾಗೂ ಅವುಗಳ ಮೂಲಗಳ ಕುರಿತು ಅಧ್ಯಯನ ಮಾಡಲು CSTEP, ಬೆಂಗಳೂರು (Centre for Study of Science, Technology and Policy) ಸಂಸ್ಥೆಗೆ ವಹಿಸಲಾಗಿರುತ್ತದೆ. |

ಸಂಖ್ಯೆ: ಅಪಜೀ 292 ಇಪಿಸಿ 2021

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಪರಿಸರ
ಮತ್ತು ಜೀವಿಪರಿಸ್ಥಿತಿ ಸಚಿವರು